**ದಿನಾಂಕ 21.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವಿ.ಹೆಚ್.ಆರ್. ವಾದಿಯ ಪರ ವಕೀಲರಿಂದಃ-**

ಕೆ.ಬಸರಾಜಪ್ಪ ನನ್ನ ತಂದೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ಆಕೆಯನ್ನು ಮಂಜಕ್ಕ ಎಂದು ಕರೆಯುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ತಂಗಿ. ನನ್ನ ತಂದೆ ದಿನಾಂಕ 15.11.2021 ರಂದು ಮರಣ ಹೊಂದಿರುತ್ತಾರೆ. ನನ್ನ ತಂದೆಗೆ ಮನೆ ಮತ್ತು ಜಮೀನು ಇದ್ದವು. ನನ್ನ ತಂದೆ ಹೆಸರಿನಲ್ಲಿ 1 ಎಕರೆ 25 ಗುಂಟೆ ಜಮೀನು ಇತ್ತು. ನನ್ನ ತಂದೆ ಮರಣ ಹೊಂದಿದ ನಂತರ ಅವರ ಹೆಸರಿನಲ್ಲಿ ಇದ್ದ ಮನೆ ಮತ್ತು ಸದರಿ ಜಮೀನು ನನ್ನ, ತಾಯಿ ಮತ್ತು ಸಹೋದರಿಗೆ ಬಂದಿವೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನನ್ನ ತಂದೆ ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಶಿವಪ್ಪ ಎನ್ನುವರಿಗೆ ಮಾರಾಟ ಮಾಡಿದ್ದರು. ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವಾವನ್ನು ದಾಖಲಿಸಿದ ವೇಳೆಗೂ ನನ್ನ ತಂದೆಯ ಹೆಸರಿನಲ್ಲಿ ಸದರಿ ಜಮೀನಿನ ಪಹಣಿ ಪತ್ರಿಕೆ ಇತ್ತು ಎಂದರೆ ಸರಿಯಲ್ಲ.

ನನ್ನ ತಂದೆ ಮರಣ ಹೊಂದುವ ಒಂದೂವರೆ ತಿಂಗಳ ಮುಂಚೆ ಅವರ ಒಂದು ಬ್ಯಾಂಕ್ ಖಾತೆಯಲ್ಲಿ ರೂ.41,00,000/- ಮತ್ತು ಇನ್ನೊಂದು ಬ್ಯಾಂಕ್ ಖಾತೆಯಲ್ಲಿ ರೂ.11,00,000/- ಹಣ ಇತ್ತು. ನನ್ನ ತಂದೆ ಮರಣ ಹೊಂದಿದ ನಂತರ ಆ ಮೊತ್ತ ಏನಾಯಿತು ಎಂದರೆ ಅವರು ಮರಣ ಹೊಂದುವ ಪೂರ್ವದಲ್ಲಿ ಅವರು ಬೇರೆಯವರಿಗೆ ಆ ಹಣವನ್ನು ಪಾವತಿಸಿರುತ್ತಾರೆ. ಆ ಹಣವನ್ನು ಯಾವ ವ್ಯವಹಾರಕ್ಕಾಗಿ ಮತ್ತು ಯಾರಿಗೆ ಪಾವತಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮರಣ ಹೊಂದಿದ

ನಂತರ ಅವರ ಖಾತೆಯಲ್ಲಿದ್ದ ಆ ಹಣ, ಅವರ ಚರಾ ಮತ್ತು ಸ್ಥಿರಾಸ್ತಿಗಳು ಪ್ರತಿವಾದಿಯರಾದ ನಮಗೆ ಬಂದಿವೆ ಎಂದರೆ ಸರಿಯಲ್ಲ.

ನನ್ನ ತಂದೆ ಎಸ್.ಎಸ್.ಎಲ್.ಸಿ. ಯ ವರೆಗೆ ವ್ಯಾಸಂಗ ಮಾಡಿರಬಹುದು. ನನ್ನ ತಾಯಿ 6 ನೇ ತರಗತಿ ವರೆಗೆ ವ್ಯಾಸಂಗ ಮಾಡಿರುತ್ತಾರೆ. ನಾನು ಡಿಪ್ಲಮೋ ವ್ಯಾಸಂಗ ಮಾಡಿದ್ದೇನೆ. 3 ನೇ ಪ್ರತಿವಾದಿ ಎಸ್.ಎಸ್.ಎಲ್.ಸಿ. ಯ ವರೆಗೆ ವ್ಯಾಸಂಗ ಮಾಡಿರುತ್ತಾರೆ. ನನ್ನ ತಂದೆಗೆ ವ್ಯವಹಾರಿಕ ಜ್ಞಾನ ಇತ್ತು.

ನನ್ನ ಪ್ರತಿವಾದ ಪತ್ರದಲ್ಲಿ ಸಲ್ಲಿಸಿರುವ ವಿಷಯಗಳು ನನಗೆ ಗೊತ್ತಿದೆ. 2021 ಜುಲೈ ನಲ್ಲಿ ನನ್ನ ತಂದೆಗೆ ಪಾರ್ಶ್ವವಾಯು ಆಗಿರುತ್ತದೆ. ಅಲ್ಲಿಂದ 3 ತಿಂಗಳವರೆಗೆ ನನ್ನ ತಂದೆಗೆ ನಾಟಿ ಔಷಧಿಯನ್ನು ಕೊಡಿಸಿದ್ದು, ಅದರಿಂದ ಗುಣಮುಖವಾಗದ ಕಾರಣ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಯಲ್ಲಿ ದಿನಾಂಕ 18.10.2021 ರಂದು ನನ್ನ ತಂದೆಯನ್ನು ದಾಖಲು ಮಾಡಲಾಯಿತು. ಆ ವೇಳೆಗೆ ನನ್ನ ತಂದೆಗೆ ಪ್ರಜ್ಞೆ ಇತ್ತು ಎಂದರೆ ಸರಿಯಲ್ಲ. ನನ್ನ ತಂದೆ ಯಾರನ್ನು ಗುರುತಿಸುತ್ತಿರಲಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ನನ್ನ ತಂದೆಗೆ ಪ್ರಜ್ಞೆ ಇರಲಿಲ್ಲ ಮತ್ತು ಅವರು ಯಾರನ್ನು ಗುರುತಿಸುತ್ತಿರಲಿಲ್ಲ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಡಾಕ್ಟರ್ ಪ್ರಶಾಂತ್ ಎನ್ನುವರು ನನ್ನ ತಂದೆಗೆ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿರುತ್ತಾರೆ, ವೈದ್ಯರ ಹೆಸರು ಸರಿಯಾಗಿ ನೆನಪಿಲ್ಲ. ನನ್ನ ತಂದೆಗೆ ಪ್ರಜ್ಞೆ ಇರಲಿಲ್ಲ ಮತ್ತು ಅವರು ಯಾರನ್ನು ಗುರುತಿಸುತ್ತಿರಲಿಲ್ಲ ಎಂದು ಈ ಪ್ರಕರಣಕ್ಕಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಚನ್ನಗಿರಿಯ ಕೆನರಾ ಬ್ಯಾಂಕ್ ನಲ್ಲಿ ಮತ್ತು ಚನ್ನಗಿರಿಯ ಪಕ್ಕದಲ್ಲಿರುವ ಅಜ್ಜಿಹಳ್ಳಿಯ ಕೆನರಾ ಬ್ಯಾಂಕ್ ನಲ್ಲಿ ಖಾತೆಗಳು ಇದ್ದವು. ನಿಪಿ.12 ರ ಬ್ಯಾಂಕ್ ಖಾತೆಯ ತೆರೆಯುವಿಕೆಯ ನಮೂನೆಯು ನನ್ನ ತಂದೆಗೆ ಸಂಬಂಧಿಸಿದೆ ಎಂದರೆ ಸರಿ. ನಿಪಿ.12 ರಲ್ಲಿ ನಮ್ಮ ತಂದೆಯ ಸಹಿಗಳು ಇವೆ ಎಂದರೆ ನನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು, ಹಾಗಾಗಿ ನಿಪಿ.12 ರಲ್ಲಿ ಇರುವ ಇಂಗ್ಲೀಷ್ ಸಹಿಗಳು ನನ್ನ ತಂದೆಯ ಸಹಿಗಳೋ ಅಥವಾ ಅಲ್ಲವೋ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.13 ರಲ್ಲಿ ಇರುವ ಸಹಿ ನನ್ನ ತಂದೆಯ ಸಹಿ ಆಗಿರುತ್ತದೆ ಎಂದರೆ ಅದು ಇಂಗ್ಲೀಷ್ ನಲ್ಲಿ ಇದ್ದು, ನನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು.

ನನ್ನ ತಂದೆ ಕೆಲವೊಮ್ಮೆ ಕನ್ನಡ ಭಾಷೆಯಲ್ಲಿ, ಕೆಲವೊಮ್ಮೆ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ.1, 12 ಮತ್ತು 13 ರಲ್ಲಿ ನಮೂದು ಇರುವ ಕೆ. ಬಸವರಾಜಪ್ಪ ಎನ್ನುವ ಸಹಿಗಳು ಒಬ್ಬರ ಸಹಿಗಳು ಎಂದರೆ ಸಹಿಗಳಲ್ಲಿ ವ್ಯತ್ಯಾಸವಿದೆ. ಆ ರೀತಿ ವ್ಯತ್ಯಾಸ ಆ ಸಹಿಗಳಲ್ಲಿ ಇವೆ ಎಂದು ಆ ದಾಖಲೆಗಳನ್ನು ಈ ದಿನ ನೋಡಿದಾಗ ತಿಳಿದು ಬಂತು.

ದಿನಾಂಕ 25.08.2021 ರಲ್ಲಿ ನನ್ನ ತಂದೆ ವಾದಿಯಿಂದ ರೂ.8,30,000/- ಹಣವನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಾಲಕ್ಕೆ ತಿಂಗಳಿಗೆ ಶೇಕಡ 1 ರಂತೆ ಬಡ್ಡಿ ಕೊಡಲು ನನ್ನ ತಂದೆ ಒಪ್ಪಿದ್ದರು ಎಂದರೆ ಸರಿಯಲ್ಲ. ಆ ಮೊತ್ತದಲ್ಲಿ ದಿನಾಂಕ 25.10.2021 ರಂದು ರೂ.4,30,000/- ಹಣವನ್ನು ಪಾವತಿಸುತ್ತೇನೆ ಎಂದು ಮತ್ತು ದಿನಾಂಕ 25.01.2022 ರಂದು ರೂ.4,00,000/- ಹಣವನ್ನು

ಪಾವತಿಸುತ್ತೇನೆ ಎಂದು ನನ್ನ ತಂದೆ ಒಪ್ಪಿದ್ದರು ಎಂದರೆ ಸರಿಯಲ್ಲ. ಆ ರೀತಿ ಒಪ್ಪಿದ್ದ ಪ್ರಕಾರ ನನ್ನ ತಂದೆ ವಾದಿಗೆ ಅಸಲು ಮತ್ತು ಬಡ್ಡಿಯನ್ನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಆ ಹಣವನ್ನು ಮರುಪಾವತಿಸುವಂತೆ ವಾದಿಯು ನನ್ನ ತಂದೆಯನ್ನು ಹಲವಾರು ಬಾರಿ ಕೇಳಿದ್ದರೂ ಕೂಡ ನನ್ನ ತಂದೆ ಮರುಪಾವತಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ನಂತರ ಸದರಿ ಹಣವನ್ನು ಮರುಪಾವತಿಸುವಂತೆ ವಾದಿಯು ಪ್ರತಿವಾದಿಯರಾದ ನಮ್ಮನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾವು ಆ ಹಣವನ್ನು ಪಾವತಿಸಲು ವಿಫಲರಾದ ಕಾರಣ ವಾದಿಯು ಈ ದಾವಾವನ್ನು ದಾಖಲಿಸಿದ್ದು, ದಾವಾದಲ್ಲಿ ಕೇಳಿರುವ ಹಣವನ್ನು ನಾವು ವಾದಿಗೆ ಕೊಡಲು ಹೊಣೆಗಾರಿಕೆ ಹೊಂದಿದ್ದೇವೆ ಎಂದರೆ ಸರಿಯಲ್ಲ. ಆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ರ ಕರಾರು ಪತ್ರವನ್ನು ನನ್ನ ತಂದೆ ಬರೆದುಕೊಟ್ಟಾಗ ಅವರು ಸಂಪೂರ್ಣ ಆರೋಗ್ಯವಂತರಾಗಿದ್ದರು ಎಂದರೆ ಸರಿಯಲ್ಲ. ನಿಪಿ.1, 12 ಮತ್ತು 13 ರ ದಾಖಲೆಗಳಲ್ಲಿ ಇರುವ ಸಹಿಗಳು ನನ್ನ ತಂದೆಯ ಸಹಿಗಳಾಗಿದ್ದರೂ ಕೂಡ ಅವುಗಳಲ್ಲಿ ವ್ಯತ್ಯಾಸ ಇದೆ ಎಂದು ಮತ್ತು ನನ್ನ ತಂದೆ ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಹನುಮಂತ ಜಿ.ಹೆಚ್.)**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಭದ್ರಾವತಿ**